ಶ್ರೀ ವಾಟಾಳ್ ನಾಗರಾಜ್:- ಸ್ವಾಮಿ, ನಾವು ಬಡವರ ಕಾರ್ಯಕ್ರಮಗಳಿಗೆ ಎಂದೂ ವಿರೋಧ ಇಲ್ಲ. ಅದರ ಬಗ್ಗೆ ಸ್ಪಷ್ಟವಾದ ಅಭಿಪ್ರಾಯ ಇದೆ. ಯಾವ ಪಕ್ಷದವರು ಬೇಕಾದರೂ ಸರ್ಕಾರದ ಸಮಾರಂಭದಲ್ಲಿ ಅವರವರ ಫೋಟೊ ಹಾಕಿಕೊಳ್ಳುವುದು ಸರ್ಕಾರದ ನೀತಿ ಎಂದು ಅಫ್ಪಣೆ ಕೊಡಿಸಿಬಿಡಿ. ಆಮೇಲೆ ನಡೆಯಲಿ ಅದು. ಅದನ್ನು ಮುಖ್ಯಮಂತ್ರಿಗಳು ಹೇಳಲಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನಿಮ್ಮದೇ ಸ್ವರಾಜ್ಯ ಅಲ್ಲ ಇದು. ತಮಿಳುನಾಡು ಸರ್ಕಾರ ಅಲ್ಲ ಇದು. ಇದು ಕರ್ನಾಟಕ ರಾಜ್ಯ.

ಶ್ರೀ ಎಂ. ಭಕ್ತವತ್ಸಲಂ:- ಅವರಿಗೆ ಭಾರತರತ್ನ ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಭಾರತರತ್ನ ಏತಕ್ಕೆ ಕೊಟ್ಟಿರಿ ಎಂದು ಗೊತ್ತು. ಓಟ್ ತೆಗೆದುಕೊಳ್ಳುವುದಕ್ಕೋಸ್ಕರ ಭಾರತರತ್ನ ಕೊಟ್ಟರಂತೆ.

ಅಧ್ಯಕ್ಷರು:- ಪರಸ್ಪರ ವಾಗ್ವಾದಗಳು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ:- ನಂತರ ನಾನು ತಮ್ಮ ಅಫ್ಪಣೆ ಪಡೆದು ಹೇಳತಕ್ಕದ್ದು ಒಂದು. ಒಳ್ಳೆಯ ದೊಡ್ಡ ವ್ಯಕ್ತಿಗಳ ಬಗ್ಗೆ, ಮತ್ತೊಬ್ಬರ ಬಗ್ಗೆ ಯಾವುದೇ ವಿಚಾರ ಮಾತನಾಡುವುದಿಲ್ಲ. ಇವತ್ತು ತಮಿಳು ಭಾಷೆ ಮಾತನಾಡಿರಬಹುದು. ಕನ್ನಡ ಭಾಷೆ ಮಾತನಾಡಿರಬಹುದು. ಯಾರೇ ಇದ್ದರೂ ಕೂಡ ನಾವು ನೂರಾರು ವರ್ಷಗಳಿಂದ ಸಹೋದರರಾಗಿ ಎಲ್ಲ ಕಡೆಯಿಂದ ನಡೆದುಕೊಂಡು ಬಂದಿದ್ದೇವೆ. ಇವತ್ತಿಗೂ ಕೂಡ ನಾವು ಹಾಗೇ ಇದ್ದೇವೆ. ಮುಂದೆ ಕೂಡ ಹಾಗೇ ಹೋಗೋಣ. ಕೆಲವು ಸಾರಿ ಕೆಲವು ವಿಚಾರಗಳು ಹಾಗೆ ಮಧ್ಯೆ ಬಂದಾಗ ಒಂದೊಂದು ಸಾರಿ ಭಿನ್ನವಾಗಿರತಕ್ಕ ಅಭಿಪ್ರಾಯ ಬರತಕ್ಕ ಸಂದರ್ಭ ಬಂದರೂ ಕೂಡ ಅದನ್ನು ನಿಭಾಯಿಸತಕ್ಕದ್ದರಲ್ಲಿ ನಮ್ಮೆಲ್ಲರ ಚಾಣಾಕ್ಷತನ, ಒಗ್ಗಟ್ಟು, ಭವಿಷ್ಯದ ಪೀಳಿಗೆಯ ದೃಷ್ಟಿಯಿಂದ, ತಮಿಳುನಾಡು-ಕರ್ನಾಟಕದ ಸಂಬಂಧದ ಸಹೋದರ ಭಾವನೆ ಇಟ್ಟುಕೊಂಡೇ ಮುಂದೆ ಹೋಗತಕ್ಕ ಸಂದರ್ಭಗಳು ಇವೆ. ಇದನ್ನು ನಾವು ಹತ್ತು ಸಾರಿ ಹೇಳಿದ್ದೇವೆ. ಕನ್ನಡ ಮಾತನಾಡುವವರು ಬೇರೆ ಕಡೆಯೂ ಇರುತ್ತಾರೆ. ನಾವು ಒಟ್ಟಿಗೆ ಹೋಗೋಣ. ಅದರ ಬಗ್ಗೆ ಏನೂ ಮಾಡುವುದು ಬೇಡ. ನಾನು ಭಕ್ತವತ್ಸಲಂ ಅವರಲ್ಲಿ ವಿನಂತಿ ಮಾಡುವುದು ಏನೆಂದರೆ ತಮ್ಮ ಭಾಷಣದಲ್ಲಿ ಸಾಕಷ್ಟು ವಿಚಾರಗಳನ್ನು ಹೇಳಿದ್ದೀರಿ; ಮತ್ತೆ ಅದನ್ನು ಬೆಳೆಸಿಕೊಂಡು ಹೋಗುವುದು ಬೇಡ.

ಶ್ರೀ ಎಂ. ಭಕ್ತವತ್ಸಲಂ:- ಲಾಸ್ಟ್ ಪಾಯಿಂಟ್.

ಶ್ರೀ ವಾಟಾಳ್ ನಾಗರಾಜ್:- ತಾವು ಎಂ. ಜಿ. ಆರ್. ಫೋಟೋವನ್ನು ಸರ್ಕಾರಿ ಸಮಾರಂಭದಲ್ಲಿ ಉಪಯೋಗಿಸುತ್ತೇವೆ ಎಂದು ಹೇಳುವುದಾದರೆ ನಾವು ಈ ಸಭೆಯಲ್ಲಿರುವುದಕ್ಕೆ ತಯಾರಿಲ್ಲ. ಇವತ್ತು ನಾವು ಹೋಗುತ್ತೇವೆ. ನನಗೆ ಬಹಳ ನೋವಾಗಿದೆ. ನನಗೆ ವೈಯುಕ್ತಿಕವಾಗಿ ಯಾರ ಬಗ್ಗೆಯೂ ದ್ವೇಷವಿಲ್ಲ. ಈ ತರಹ ತಮಿಳುನಾಡು ರಾಜಕಾರಣಿಗಳನ್ನು ನಮ್ಮ ಸಮಾರಂಭದಲ್ಲಿ ಹಾಕಿಕೊಳ್ಳಬಹುದು ಎಂದು ಹೇಳುವುದಾದರೆ ನಾವು ಏತಕ್ಕೆ ಇರಬೇಕು? ಈ ರಾಜ್ಯವನ್ನು ನೀವು ತಮಿಳುನಾಡಿಗೆ ಮಾರುವುದು ಒಳ್ಳೆಯದು.

(ಶ್ರೀ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ನಾನು ಮುಖ್ಯಮಂತ್ರಿಗಳ ಗಮನ ಸೆಳೆಯುವುದು ಏನೆಂದರೆ, ಎಂ.ಜಿ.ಆರ್. ಅವರಿಗೆ ಕೇಂದ್ರ ಸರ್ಕಾರದವರು ಭಾರತ ರತ್ನ ಪ್ರಶಸ್ತಿ ಕೊಟ್ಟಿದ್ದಾರೆ. ಇದೆಲ್ಲಾ ಒಪ್ಪೋಣ. ಅವರು ಚಲನಚಿತ್ರ ಕ್ಷೇತ್ರದಲ್ಲಿ ಬಹಳ ದೊಡ್ಡ ಹೆಸರನ್ನು ಗಳಿಸಿದ್ದರು. ಆದಾದನಂತರ ಬಡವರಿಗೋಸ್ಕರ ಅನೇಕ ಕಾರ್ಯಕ್ರಮಗಳನ್ನು ಮಾಡಿದ್ದಾರೆ. ಅದೆಲ್ಲಾ ಒಪ್ಪೋಣ. ಆದರೆ ನಾನು ಕೇಳತಕ್ಕದ್ದು ಏನೆಂದರೆ, ಬೆಂಗಳೂರು ಮಹಾನಗರಪಾಲಿಕೆ ಸೈಟ್ ಹಂಚತಕ್ಕ ಪ್ರೋಗ್ರಾಂನಲ್ಲಿ ಈ ರೀತಿ ಹಾಕಿಕೊಳ್ಳುವುದು ಸರಿಯೇ? ಕಾಂಗ್ರೆಸ್ ಪಾರ್ಟಿ ಪ್ರೋಗ್ರಾಂ ಆಯಿತು ಎಂದು ಇಟ್ಟುಕೊಳ್ಳಿ. ಅಲ್ಲಿ ನೀವು ಯಾವುದು ಬೇಕಾದರೂ ಹಾಕಿಕೊಳ್ಳಿ. ನಮ್ಮದೇನೂ ಅಭ್ಯಂತರ ಇಲ್ಲ. ಅಥವಾ ಪ್ರಕಟಣೆ ಮಾಡತಕ್ಕ ಸಂದರ್ಭದಲ್ಲಿ ಎ. ಡಿ. ಎಂ. ಕೆ. ಯವರು ಗೆದ್ದಿದ್ದಾರೆ, ಅವರಿಂದ ಪ್ರಕಟಣೆ ಆಗಿದ್ದರೂ ನಮ್ಮದೇನೂ ತಕರಾರಿಲ್ಲ. ಇದು ಮಹಾನಗರ ಪಾಲಿಕೆಯ ಅಡ್ವರ್ಟೈಸ್‌ಮೆಂಟ್. ಅವರ